ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆಃ 5048/2022

ಪ್ರಾ ಸಾ 21 ಚಾ ಸಾ 36

ಹೆಸರುಃ ಗೀತಾ

ಗಂಡನ ಹೆಸರುಃ ದೇವ

ವಯಸ್ಸುಃ 40 ವರ್ಷ

ಉದ್ಯೋಗಃ ಬಟ್ಟೆ ವ್ಯಾಪಾರ

ವಾಸಃ ಕೆ ಆರ್ ಸಾಗರ

ದಿಃ 06.08.2024 ರಂದು ಸಾಕ್ಷಿಯನ್ನು ಕರೆಸಿ
ಪ್ರಮಾಣ ವಚನ ಬೋಧಿಸಲಾಯ್ತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ನಾನು ಕೆ ಆರ್ ಸಾಗರದ ಬಜಾರ್ ಲೈನ್ ನಲ್ಲಿ ವಾಸ ಇದ್ದೇನೆ. ಗಂಗಾರಾಮುರವರು ಕೂಡ ತನ್ನ ಕುಟುಂಬದ ಜೊತೆಯಲ್ಲಿ ಕೆ ಆರ್ ಸಾಗರದ ಬಜಾರ್ ಲೈನ್ ನಲ್ಲಿ ವಾಸ ಇದ್ದರು .

2. ಸದರಿ ಗಂಗಾರಾಮುವಿನ ಹೆಂಡತಿಯ ಹೆಸರು ಲಕ್ಷ್ಮಿ ಅವರಿಗೆ ಮೂರು ಜನ ಮಕ್ಕಳು . ಅವರೆಂದರೆ

ಕೋಮಲ್, ಕುನಾಲ್ ಮತ್ತು ರಾಜ್. ಗೋವಿಂದ ಗಂಗಾರಾಮುವಿನ ಅಣ್ಣನ ಮಗ. ಅವರೆಲ್ಲರೂ ಕೆ ಆರ್ ಸಾಗರದ ಬಜಾರ್ ಲೈನ್ ನಲ್ಲಿ ವಾಸ ಇದ್ದರು.

3. ಗಂಗಾರಾಮು ಊರಿನಿಂದ ಹೊರಗೆ ಹೋಗಿ ಪ್ಲಾಸ್ಟಿಕ್ ಹೂವಿನ ಮಾರಾಟ ಮಾಡುವ ಕೆಲಸ ಮಾಡುತ್ತಿದ್ದ.

4. ಸುಮಾರು 2 ವರುಷದ ಹಿಂದೆ ಗಂಗಾರಾಮು ಕೆಲಸದ ನಿಮಿತ್ತ ಹೊರಗೆ ಹೋಗಿದ್ದ . ಆತನ ಮನೆಯಲ್ಲಿ ಆತನ ಹೆಂಡತಿ , ಮೂರು ಜನ ಮಕ್ಕಳು ಮತ್ತು ಗೋವಿಂದ ಇದ್ದರು .

5. ಸುಮಾರು 2 ವರುಷದ ಹಿಂದೆ ಬೆಳಗ್ಗೆ 9 ಗಂಟೆಗೆ ನಾನು ಮನೆಯಲ್ಲಿದ್ದಾಗ ಗಂಗಾರಾಮುವಿನ ಹೆಂಡತಿ ಲಕ್ಷ್ಮಿ, ಆಕೆಯ ಮೂರು ಜನ ಮಕ್ಕಳು ಮತ್ತು ಗಂಗಾರಾಮುವಿನ ಅಣ್ಣನ ಮಗ ಗೋವಿಂದನನ್ನು ಯಾರೋ ಕೊಲೆ ಮಾಡಿದ್ದಾರೆ ಎಂಬ ವಿಚಾರ ತಿಳಿಯಿತು.

6. ಆ ರೀತಿ ವಿಚಾರ ತಿಳಿದ ನಾನು ಬಜಾರ್ ಲೈನ್

ನಲ್ಲಿರುವ ಗಂಗಾರಾಮುವಿನ ಮನೆಗೆ ಹೋಗಿ ನೋಡಿದಾಗ ಅಲ್ಲಿ ಲಕ್ಷ್ಮಿ , ಆಕೆಯ ಮೂರು ಜನ ಮಕ್ಕಳು ಮತ್ತು ಗೋವಿಂದನನ್ನು ಕೊಲೆ ಮಾಡಲಾಗಿತ್ತು.

7. ಆನಂತರ ಐದೂ ಶವಗಳನ್ನು ಮೈಸೂರಿನ ಕೆ ಆರ್ ಆಸ್ಪತ್ರೆಗೆ ಕಳುಹಿಸಿ ಕೊಟ್ಟರು. ನಾನು ಮೈಸೂರಿನ ಕೆ ಆರ್ ಆಸ್ಪತ್ರೆಗೆ ಹೋಗಿ ನೋಡಿದಾಗ ಅಲ್ಲಿಗೆ ಪೊಲೀಸರು ಮತ್ತು ಲೇಡಿ ಇನ್ಸ್ ಪೆಕ್ಟರ್ ಬಂದಿದ್ದರು. ಅಲ್ಲಿ ನಾನು ಆಸ್ಪತ್ರೆಯ ಶವಾಗಾರದಲ್ಲಿ ಕೋಮಲ್ ನ ಶವವನ್ನು ನೋಡಿರುತ್ತೇನೆ.

8. ನಾನು ನೋಡಿದಾಗ ಕೋಮಲ್ ನ ಮೂಗು ಮತ್ತು ಹಣೆಯ ಭಾಗದಲ್ಲಿ ಗಾಯಗಳಾಗಿದ್ದವು. ಆತನ ಮುಖದ ಭಾಗದಲ್ಲಿ ಮೂರು ಗಾಯಗಳಿದ್ದವು. ಅದೇ ರೀತಿ ಕೈಗಳಿಗೂ ಕೂಡ ಗಾಯಗಳಾಗಿದ್ದವು. ಆ ಗಾಯಗಳನ್ನು ನೋಡಿದಾಗ ಯಾರೋ ಆತನನ್ನು ಹೊಡೆದು ಸಾಯಿಸಿದ ರೀತಿಯಲ್ಲಿ ಕಂಡುಬರುತ್ತಿತ್ತು.

9. ಆ ಶವವನ್ನು ನೋಡಿಕೊಂಡು ಪೊಲೀಸರು ಬರವಣಿಗೆ ಮಾಡಿದ್ದಾರೆ . ಆ ಬರವಣಿಗೆಯನ್ನು ಈಗ ನೋಡಿದೆ . ಸಾಕ್ಷಿ ಗುರುತಿಸಿದ ದಾಖಲೆಯನ್ನು

ಈಗಾಗಲೇ ನಿಪಿ 33 ಎಂದು ಗುರುತಿಸಲಾಗಿದೆ. ಸಾಕ್ಷಿಯ ರುಜುವನ್ನು ನಿಪಿ.33ಎ ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿ ಪೊಲೀಸರು ನಿಪಿ 34 ರಂತೆ 4 ಪೊಟೋಗಳನ್ನು ತೆಗೆದಿದ್ದು ಅದರಲ್ಲಿ ಕೋಮಲ್ ನ ಶವ ಕಂಡುಬರುತ್ತದೆ . ನಿಪಿ 34ರ ಪೊಟೋ.1 ಮತ್ತು 3 ರಲ್ಲಿ ನನ್ನ ಇರುವಿಕೆ ಕಂಡುಬರುತ್ತಿದ್ದು ಆ ಪೊಟೋಗಳಲ್ಲಿ ಪಿಂಕ್ ಬಣ್ಣದ ನೈಟಿ ಧರಿಸಿ ವೇಲ್ ಹಾಕಿರುವ ಹೆಂಗಸು ನಾನು.

ಪಾಟೀ ಸವಾಲುಃ ಆರೋಪಿಗಳ ಪರವಾಗಿ ಃ
ಶ್ರೀ ಎಸ್ ಆರ್ ಎಸ್ ವಕೀಲರಿಂದಃ

10. ನಾನು ಮೈಸೂರಿನ ಶವಾಗಾರಕ್ಕೆ ಬೆಳಗ್ಗೆ 11ಗಂಟೆಗೆ ಹೋಗಿರುತ್ತೇನೆ. ಆ ಪಂಚನಾಮೆಯನ್ನು ಮದ್ಯಾಹ್ನ 2ಗಂಟೆಯಿಂದ ಸಂಜೆ 4ಗಂಟೆಯವರೆಗೆ ಮಾಡಿರುತ್ತಾರೆ . ಅದರಲ್ಲಿ ಏನು ಬರೆದಿದೆ ಎಂದು ಪೊಲೀಸರು ನನಗೆ ಆ ದಾಖಲೆಯನ್ನು ಓದಿ ತಿಳಿಸಿಲ್ಲ.

11. ನಾನು ಸ್ಥಳಕ್ಕೆ ಹೋಗಿಲ್ಲ ಮತ್ತು ನನ್ನ ಸಮಕ್ಷಮದಲ್ಲಿ ಪಂಚನಾಮೆ ಮಾಡಿಲ್ಲ ಎನ್ನುವುದು ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ .

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)